ಪಾಠ - ೭

# ಪ್ರಾಮಾಣಿಕ ಬಾಲಕ

ಮೌಲ್ಯ:- ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು.

---

## ಪದಗಳ ಅರ್ಥ

1)ಪ್ರವೇಶಿಸು = ಒಳಗೆ ಹೋಗು

2) ಪ್ರಾಮಾಣಿಕತೆ = ನಂಬಿಕೆಗೆ ಅರ್ಹ

3) ಒಡನಾಟ = ಸಹವಾಸ, ಜೊತೆಯಲ್ಲಿರುವುದು

4) ಪತಾಕೆ = ಬಾವುಟ,ಧ್ವಜ.

---

## ಆ) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧.ಮಕ್ಕಳು ತೋಪನ್ನು ಏಕೆ ಪ್ರವೇಶಿಸಿದರು ?

ಉ : ಮಕ್ಕಳು ಮಾವಿನ ಹಣ್ಣನ್ನು ತಿನ್ನುವ ಆಸೆಯಿಂದ ತೋಪನ್ನು ಪ್ರವೇಶಿಸಿದರು.

---

೨.ಮಕ್ಕಳು ಏಕೆ ಗಲಿಬಿಲಿಗೊಂಡರು ?

ಉ : ಮಕ್ಕಳು ತೋಟದ ಮಾಲೀಕನನ್ನು ನೋಡಿ ಗಲಿಬಿಲಿಗೊಂಡರು

---

೩. ಮಾಲೀಕನ ಮನಸ್ಸು ಏಕೆ ಕರಗಿತು ?

ಉ: ಬಾಲಕನ ಮುಗ್ಧ ಹಾಗೂ ಪ್ರಾಮಾಣಿಕ ಮಾತುಗಳನ್ನು ಕೇಳಿ ಮಾಲೀಕನ ಮನಸ್ಸು ಕರಗಿತು.

---

೪.ಶಾಸ್ತ್ರಿಯವರಿಗೆ ಸರ್ಕಾರ ಯಾವ ಪ್ರಶಸ್ತಿ ನೀಡಿ ಗೌರವಿಸಿತು ?

ಉ: ಶಾಸ್ತ್ರಿಯವರಿಗೆ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

---

ಈ.ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1.ಬಾಲಕ ಮಾಲೀಕನಿಗೆ ಏನೆಂದು ಹೇಳಿದನು?

ಉ: ಬಾಲಕ ಮಾಲೀಕನಿಗೆ ವಿನಯದಿಂದ ನಾನು ಮಾಡಿದ್ದು ತಪ್ಪು ಇನ್ನೆಂದು ಇಂತಹ ತಪ್ಪನ್ನು ಮಾಡುವುದಿಲ್ಲ ಆದರೆ ನಾನು ಮಾಡಿದ ತಪ್ಪಿಗೆ ನನ್ನ ತಂದೆ, ತಾಯಿ ಮತ್ತು ಗುರುಗಳು ನಿಂದನೆಗೆ ಗುರಿಯಾದರಲ್ಲ ಎಂದು ಹೇಳಿದನು.

---

2. ಮಾಲೀಕ ಬಾಲಕನನ್ನು ಹೇಗೆ ಸಮಾಧಾನಪಡಿಸಿದನು?

ಉ: ಮಾಲೀಕ ಮತ್ತಷ್ಟು ಮಾವಿನ ಹಣ್ಣುಗಳನ್ನು ನೀಡಿ ಬಾಲಕನನ್ನು ಸಮಾಧಾನಪಡಿಸಿದನು.

---

3.ಶಾಸ್ತ್ರಿಯವರು ಮಂತ್ರಿ ಪದವಿಗೆ ಏಕೆ ರಾಜೀನಾಮೆ ನೀಡಿದರು?

ಉ: ರೈಲ್ವೇ ಅಪಘಾತವೊಂದಕ್ಕೆ ತಾವೇ ಹೊಣೆ ಹೊತ್ತು ತಪ್ಪು ತಮ್ಮದ್ದಲ್ಲದಿದ್ದರು ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಧಿಮಂತಿಕೆ ಮೆರೆದರು.

---

---

ಊ.ಕೊಟ್ಟಿರುವ ಪದಗಳನ್ನು ಓದಿ, ಆನಂತರ ಸ್ವಂತ ವಾಕ್ಯ ರಚಿಸು.

ಮನೆಮಾತಾಗು : ಶಾಸ್ತ್ರಿಯವರು ತಮ್ಮ ನಡುವಳಿಕೆಯಿಂದ ಮನೆಮಾತಾಗಿದ್ದರು.

---

ಹೊಣೆಹೊತ್ತು : ಶಾಸ್ತ್ರಿಯವರು ಅಪಘಾತದ ಹೊಣೆಹೊತ್ತು ರಾಜೀನಾಮೆ ನೀಡಿದರು.

---

ಪುಟಿದೇಳು : ನಾವು ಕಷ್ಟಗಳಿಂದ ಪುಟಿದೇಳಬೇಕು.

---

ಆಕರ್ಷಿಸು : ಬಾಲಕನ ಪ್ರಾಮಾಣಿಕತೆ ಮಾಲೀಕನನ್ನು ಆಕರ್ಷಿಸಿತು.

---

ಉಕ್ತಲೇಖನ

1. ಪ್ರಾಮಾಣಿಕ
2. ಮಾಲೀಕ
3. ಮಾವಿನ
4. ಶಾಸ್ತ್ರಿ
5. ನೆಹರು
6. ರೈಲ್ವೆ
7. ರಾಜೀನಾಮೆ
8. ಮಂತ್ರಿ
9. ಬಾಲಕ
10. ಸ್ವಾತಂತ್ರ್ಯ